ಇ) ಶಹಬಾದ್ ನಗರದಲ್ಲಿ ಇದುವರೆವಿಗೆ ಕೊಳಚೆ ಪ್ರದೇಶಗಳನ್ನು ಘೋಷಿಸದೆ ಇರುವುದರಿಂದ ಯಾವುದೇ ಕೊಳಚೆ ಪ್ರದೇಶದಲ್ಲಿ ಕೆಲಸಗಳನ್ನು ತೆಗೆದುಕೊಂಡಿರುವುದಿಲ್ಲ.

ಈ) ಕೊಳಚೆ ನಿರ್ಮೂಲನಾ ಕಾರ್ಯವನ್ನು ಕೈಗೊಂಡಿಲ್ಲದ ಕಾರಣ ಹಣ ಖರ್ಚು ಮಾಡುವ ಸಂಭವ ಉದ್ಭವಿಸುವುದಿಲ್ಲ.

ಉ) ಪರಿಶೀಲಿಸಲಾಗುವುದು.

ಊ) ಉದ್ಭವಿಸಂವುದಿಲ್ಲ.

ವಿಷಯ–ಭಾಲ್ಕಿಯ ತಾಲ್ಲೂಕುವ್ಯವಸಾಯೋತ್ಪನ್ನಸಹಕಾರ ಮಾರುಕಟ್ಟೆಯ ವ್ಯವಹಾರಗಳು

೧೭ (೨೨) ಶ್ರೀ ಭೀಮಣ್ಣ ಖಂಡ್ರೆ (ಭಾಲ್ಕಿ) ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಭಾಲ್ಕಿ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವ್ಯವಹಾರಗಳನ್ನು ನಡೆಯಿಸುವುದಕ್ಕಾಗಿ ಆಡಳಿತಾಧಿಕಾರಿಯನ್ನು ನಿಯಮಿಸಿರುವುದು ನಿಜವೆ ?

ಆ) ಹಾಗಾದರೆ ಎಷ್ಟು ವರ್ಷಗಳು ತಿಂಗಳುಗಳು ಮತ್ತು ದಿನಗಳು–ಇದರ ಬಗ್ಗೆ ವಿವರಗಳನ್ನು ಕೊಡಂವುದು.

ಇ) ೩೦–೬–೮೩ರವರೆಗೆ ಇದ್ದ ಸಂಘದ ಆಸ್ತಿ ಮತ್ತು ಜವಾಬ್ದಾರಿಗಳನ್ನು ಒದಗಿಸುವುದು;

ಈ) ಸಂಘದಲ್ಲಿ ಆಡಳಿತ ಅಧಿಕಾರಿಯು ನೇಮಿಸಲ್ಪಟ್ಟ ಮೇಲೆ ಪ್ರತಿ ವರ್ಷದ ವ್ಯವಹಾರ, ಆದಾಯ ವೆಚ್ಚ ಮತ್ತು ಲಾಭಗಳನ್ನು ಸೂಚಿಸುವುದು;

ಉ) ಸಂಘದ ಐದು ಲಕ್ಷ ಬೆಲೆ ಬಾಳುವ ನವೀನ ಕಾರ್ಯದಾಯಕವಾದ ಎಣ್ಣೆ ಹೊರದೂಡುವ ಯಂತ ಮತ್ತು ಅದರ ದೊಡ್ಡ ಕಟ್ಟಡ ಮತ್ತು ಉಗ್ರಾಣ ಕಳೆದ ೮ ವರ್ಷಗಳಿಂದ ಸುಸ್ಥಿಯಾಗಿದ್ದು ಅದು ಕೆಲಸ ಮಾಡದೆ ಇರುವುದರಿಂದ ಮತ್ತು ಅದರ ಉಪಯೋಗ ಆಗದೆ ಇರುವುದರಿಂದ ಕೆಟ್ಟಿರುವುದು ನಿಜವೆ ? (ಯಂತ್ರಕ್ಕೆ ಉಂಟಾದ ಪ್ರತಿ ವರ್ಷದ ಹಾನಿಯನ್ನು ಒದಗಿಸುವುದು)

ಊ) ವ್ಯವಹಾರಗಳನ್ನು ಸರಿಪಡಿಸುವುದಕ್ಕೆ ಎಣ್ಣೆ ಯಂತ್ರವನ್ನು ಮತ್ತು ಇತರ ಆಸ್ತಿಗಳನ್ನು ಪ್ರಭಾವಿತ ರೂಪದಲ್ಲಿ ಉಪಯೋಗಿಸಿಕೊಳ್ಳುವುದಕ್ಕಾಗಿ ಸರ್ಕಾರದವರು ತೆಗೆದುಕೊಂಡ ಕ್ರಮ ವೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—

ಅ) ಹೌದು.

ಆ) ಸಂಘದ ಕಾರ್ಯ ನಿರ್ವಾಹಕ ಮಂಡಳಿಯು ಗುಲ್ಬರ್ಗ ವಿಭಾಗದ ಸಂಯುಕ್ತ ನಿಬಂಧಕರ ಆಜ್ಞೆ ಕ್ರಮಾಂಕ ಎಸ್ ಳ ಜಿಆರ್‌ಸಿ ಎಸ್‌ಎಸ್‌ಎಸ್ ೩೬–೭೯–೮೦ ದಿನಾಂಕ ೧೪–೯–೭೯ ರಲ್ಲಿ ಪದಚ್ಯುತಿಯಾಗಿ ಆಡಳಿತ ಅಧಿಕಾರಿಯನ್ನು ನೇಮಿಸಿ ಸಂಘದ ವ್ಯವಹಾರಗಳನ್ನು ಅವರಿಗೆ ಒಪ್ಪಿಸಲಾಯಿತು. ಆಡಳಿತ ಅಧಿಕಾರಿಯು ದಿನಾಂಕ ೨೫–೯–೧೯೭೯ರಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಅವರ ಕಾರ್ಯಾವಧಿಯು ದಿನಾಂಕ ೧೦–೮–೮೩ರವರೆಗೆ ೩ ವರ್ಷ ೧೦ ತಿಂಗಳು ಮತ್ತು ೧೧ ದಿವಸಗಳು ಆಗಿರುತ್ತದೆ.

ಇ) ೩೦–೬–೮೩ರ ವರೆಗೆ ಸಂಘದ ಹಂಗಾಮಿ ಆಸ್ತಿ ಮತ್ತು ಜವಾಬ್ದಾರಿಯ ತಃಖ್ತೆಯನ್ನು ಲಗತ್ತಿಸಲಾಗಿದೆ.

ಈ) ಆಡಳಿತ ಅಧಿಕಾರಿಯು ನೇಮಕವಾದ ಮೇಲೆ ಸಂಘದ ವ್ಯವಹಾರ, ಆದಾಯ, ವೆಚ್ಚ, ಲಾಭ ಮತ್ತು ಹಾನಿಗಳ ತಃಖ್ತೆಯನ್ನು ಲಗತ್ತಿಸಲಾಗಿದೆ.

ಉ) ಐದು ಲಕ್ಷ ಬೆಲೆ ಬಾಳುವ ಎಣ್ಣೆ ಹೊರದೂಡುವ ಯಂತ್ರವನ್ನು ಸ್ಥಾಪಿಸಲಾಗಿದೆ ಎನ್ನುವುದು ಸರಿಯಲ್ಲ. ೧೯೬೨-೬೩ರಲ್ಲಿ ಸರ್ಕಾರದವರು ೫೫೦ ಸಾವಿರ ರೂ. ಗಳ ಧನ ಸಹಾಯವನ್ನು ಚಿಕ್ಕ ಪ್ರಮಾಣದ ಎಣ್ಣೆ ಹೊರದೂಡುವ ಯಂತ್ರವನ್ನು ಸ್ಥಾಪಿಸುವುದಕ್ಕಾಗಿ ಮಂಜೂರು ಮಾಡಿರುವುದು. ಈ ಯಂತ್ರವು ೧೯೬೮ರಲ್ಲಿ ಸ್ಥಾಪನೆಯಾಯಿತು. ಈ ಯಂತ್ರಕ್ಕೆ ಕೆಳಗೆ ಸೂಚಿಸಿದಂತೆ ಹಣದ ಗುಂತಾವಣೆಯಾಗಿದೆ.

೧) ಎಣ್ಣೆ ಯಂತ್ರದ ಕಟ್ಟಡ	ರೂ. ೩೫೦೫೦-೦೦
೨) ಎಣ್ಣೆ ಯಂತ್ರ	೪೮೬೪೦-೦೦
ಒಟ್ಟು	೮೧೬೯೦-೦೦

ಈ ಎಣ್ಣೆ ಯಂತ್ರವು ೧೯೭೦-೭೧ರಲ್ಲಿ ಮುಚ್ಚಲ್ಪಟ್ಟಿತು. ೧೯೭೦-೭೨ರಲ್ಲಿ ೪೫ ದಿವಸಗಳವರೆಗೆ ಮತ್ತು ೭೪-೭೫ರಲ್ಲಿ ೨೯ ದಿವಸಗಳವರೆಗೆ ಕಾರ್ಯ ನಿರ್ವಾಹಕ ಮಂಡಳಿಯವರು ಎಣ್ಣೆಯಂತ್ರವನ್ನು ಖಾಸಗಿ ಉದ್ಯಮದವರಿಗೆ ಗುತ್ತಿಗೆಗೆ ಕೊಟ್ಟಿದ್ದರು. ಎಣ್ಣೆಕಾಳುಗಳ ಅಭಾವ ಇದ್ದುದರಿಂದ ಖಾಸಗಿ ಉದ್ಯಮದಾರರು ಕೂಡ ಎಣ್ಣೆಯಂತ್ರವನ್ನು ನಡೆಸಲು ಅಸಾಧ್ಯವೆಂದು ಕಂಡು ಬಂದದ್ದರಿಂದ ಕೆಲಸ ಸ್ಥಗಿತಗೊಂಡಿತು.

ಆದರೆ ಯಂತ್ರವು ಸರಿಯಾದ ಸ್ಥಿತಿಯಲ್ಲಿ ಇದೆ, ಮತ್ತು ಆದಕ್ಕೆ ಯಾವ ವಿಧವಾದ ಹಾನಿ ಉಂಟಾಗಿರುವುದಿಲ್ಲ. ಚಿಕ್ಕ ಪ್ರಮಾಣದಲ್ಲಿ ದುರಸ್ತಿಯಾದರೆ ಯಂತ್ರವು ಪುನಃ ಕಾರ್ಯನಿರ್ವಹಿಸ ಬಹುದು.

ಸಂಘವಲ್ಲಿ ೨ ಮಧ್ಯಮ ವರ್ಗದ ಉಗ್ರಾಣಗಳಿವೆ. ಇವುಗಳಲ್ಲಿ ಒಂದನ್ನು ಕಾರಂಜಿಯೋಜನೆ ಅಧಿಕಾರಿಗಳಿಗೆ ಬಾಡಿಗೆಗೆ ಕೊಡಲಾಗಿದೆ. ಎರಡನೆ ಉಗ್ರಾಣವನ್ನು ಸಂಘವು ವ್ಯವಸಾಯೋ ಉತ್ಪನ್ನ ಸಾಮಗ್ರಿಗಳನ್ನು ಅಂದರೆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕಗಳು, ಪ್ರಸಾಯ ಉಪಕರಣಗಳು ಆಹಾರ ಧಾನ್ಯಗಳು ಮತ್ತು ಸಕ್ಕರೆಯನ್ನು ದಾಸ್ತಾನು ಮಾಡುವುದಕ್ಕಾಗಿ ಉಪಯೋಗಿಸುತ್ತಿರುವರು. ಅದೇ ಕಟ್ಟಡದಲ್ಲಿ ಸಂಘದ ಕಚೇರಿಯು ಕೂಡ ಕೆಲಸ ನಿರ್ವಹಿಸುತ್ತಿರುವುದು.

ಆಡಳಿತ ಅಧಿಕಾರಿಯು ಅಧಿಕಾರವನ್ನು ವಹಿಸಿಕೊಳ್ಳುವ ಮುನ್ನ ಸರ್ಕಾರದ ಸಾಲವು ಮರು ಪಾವತಿಯಾಗಿದೆ ಮತ್ತು ಸಾಲದ ಮೇಲೆ ಪಾವತಿಯಾದ ಬಡ್ಡಿಯು ಮಾತ್ರ ಹಾನಿಯಾಗಿರುತ್ತದೆ.

ಊ) ಕಾರ್ಯ ನಿರ್ವಾಹಕ ಮಂಡಳಿಯು ದಿನಾಂಕ ೧೪-೯-೭೯ರಲ್ಲಿ ಪದಚ್ಯುತಿಯಾಯಿತು. ಆ ಸಮಯದಲ್ಲಿ ಸಂಘದಲ್ಲಿ ಕೂಡಿಬಿದ್ದ ಹಾನಿಯು ರೂ. ೨,೬೫,೫೨೩-೦೦ ರಷ್ಟು ಇತ್ತು. ಆಡಳಿತ ಅಧಿಕಾರಿಯು ಅಧಿಕಾರವನ್ನು ವಹಿಸಿಕೊಂಡ ಮೇಲೆ ಸಂಘದ ಕಾರ್ಯಕ್ರಮಗಳ ಫಲಿತಾಂಶಗಳು ಈ ಕೆಳಗೆ ನಮೂದಿಸಿದಂತೆ ಇವೆ:

೧೯೭೯-೮೦	ಲಾಭ	ರೂ. ೨೬,೧೬೨-೯೭
೧೯೮೦-೮೧	ಲಾಭ	೫ ೨೩೨-೬೦
೧೯೮೧-೮೨	ನಷ್ಟ	೫೦,೪೬೨-೬೩
೧೯೮೨-೮೩	ಲಾಭ	೯,೯೮೮-೬೪

(ಹಂಗಾಮಿ)

೧೪ ನ್ಯೂನತೆಗಳ ಪ್ರಯುಕ್ತ ಸಂಘದ ಕಾರ್ಯ ನಿರ್ವಾಹಕ ಮಂಡಳಿಯು ಪದಚ್ಯುತಿಯಾಗಿದ್ದು ೮ ನ್ಯೂನತೆಗಳನ್ನು ಆಡಳಿತ ಅಧಿಕಾರಿಯು ಸರಿಪಡಿಸಿರುವರು.

ಪ್ರಸ್ತುತದಲ್ಲಿ ಎಣ್ಣೆಕಾಳುಗಳ ಅಭಿವೃದ್ಧಿಯ ಯೋಜನೆಗಳನ್ನು ಗುಲ್ಬರ್ಗ ವಿಭಾಗದಲ್ಲಿ ಕಲ್ಪಿಸಿರುವುದರಿಂದ ಎಣ್ಣೆ ಕಾಳುಗಳ ಉತ್ಪಾದನೆಯಲ್ಲಿ ಹೆಚ್ಚಳವಾಗುವ ಸಂಭವಿದೆ. ಈ ಎಣ್ಣೆ ಯಂತ್ರವನ್ನು ಕಾರ್ಯರೂಪದಲ್ಲಿ ತರುವ ಅನೇಕ ಅವಕಾಶಗಳಿವೆ ಮತ್ತು ಈ ಸಂಘವನ್ನು ಪುನರುಜ್ಜೀವನ ಯೋಜನೆಯಲ್ಲಿ ಅಳವಡಿಸಿ ಎಣ್ಣೆ ಯಂತ್ರವನ್ನು ಪ್ರಾರಂಭಿಸುವ ಆಸ್ಪದವಿದೆ.

ಭಾಲ್ಕಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಭಾಲ್ಕಿ, ಬೀದರ್ ಜಿಲ್ಲೆ ಆಸ್ತಿ ಜವಾಬ್ದಾರಿ
ತಃಖ್ತೆ 30-683 ರವರೆಗೆ (ತಾತ್ಕಾಲಿಕ)

ಜವಾಬ್ದಾರಿ		ಆಸ್ತಿ		
ಪಾವತಿಯಾದ ಕೇರು ಬಂಡವಾಳ	೩,೫೬,೬೩೬-೯೨	ನಗದು ಹಣ ಶಿಲ್ಕು		೩೧೪-೦೦
ವ್ಯಕ್ತಿಗಳು ಮತ್ತು ಇತರರು ೧೭,೬೩೬-೯೨		ಜಿಲ್ಲಾ ಮಧ್ಯವರ್ತಿ ಬ್ಯಾಂಕಿನಲ್ಲಿ ನಗದು		೯,೧೫೦-೭೬
ಸರ್ಕಾರಿ ಬಂಡವಾಳ ೩,೪೦,೦೦೦-೦೦		ಹಿಂದಿನ ಆಡಾವೆ ಪತ್ರಿಕೆ ಪ್ರಕಾರ ಕಡಿಮೆಯಾದ ಹಣ		೧,೯೮೭-೮೨
ಕ್ರಮಬದ್ಧ ಮತ್ತು ಇತರ ನಿಧಿಗಳು	೪೬,೯೨೦-೩೩	ಕೇರು ಬಂಡವಾಳದಲ್ಲಿ ಮತ್ತು ಸರ್ಕಾರದ ಭದ್ರತಾ ಖಾತೆಯಲ್ಲಿ ಹೂಡಿಕೆಗಳು		೪೩,೨೪೪-೫೯
ಇಳುವರಿ ನಿಧಿ	೪೪,೬೮೯-೦೦	ಜಮೀನು ಮತ್ತು ಕಟ್ಟಡ		
ಸರ್ಕಾರಿ ಉಗ್ರಾಣ ಸಾಲ	೬,೭೩೯-೭೫			
ಶಿಬ್ಬಂದಿಯವರ ಭದ್ರತಾ ಹಣ	೯,೮೩೭-೦೦	ಮಧ್ಯಮ ವರ್ಗದ ಉಗ್ರಾಣ	೪೦,೫೨೪-೭೮	
ವಾಹನದ ಹಣ ವ್ಯವಹಾರದ ಖಾತೆ	೪೦೦-೦೦	(ಹೊಸದು)	೨೩,೧೯೭-೭೯	
ತನಿಖಾ ಆಕ್ಷೇಪಣೆಯ ಕಾಯ್ದಿಟ್ಟ ನಿಧಿ	೫,೪೦೮-೦೨	ಎಣ್ಣೆ ಯಂತ್ರದ ಕಟ್ಟಡ	೩೩,೮೫೦-೦೨	
ಹಿಂದಿನ ಆಡಾವೆ ಪತ್ರಿಕೆಯ ಪ್ರಕಾರ ಇನ್ನು ಇತರೆ ಬಾಬುಗಳು	೧೭,೯೦೮-೨೩	ಎಣ್ಣೆ ಹೊರದೂಡುವ ಯಂತ್ರ	೪೮,೬೪೦-೦೬	
ಅವಮಾನತ್ತು ಜವಾಬ್ದಾರಿ	೨,೭೧೧-೫೫	ಬಾವಿಯ ಬೆಲೆ	೧,೬೯೯-೩೦	
ಸಾಧಿಲ್ವಾರು ಪಾವತಿಗಳ ಬಗ್ಗೆ ನಿಧಿ	೨೬,೮೦೧-೦೦	ತಂತಿಯ ಬೆಲೆ	೩,೨೨೭-೩೪	
ಹಿಂದಿನ ಆಡಾವೆ ಪತ್ರಿಕೆಯ ಪ್ರಕಾರ ಅವಮಾನತ್ತು ಖಾತೆ	೬೫೫-೦	ಜಮೀನು	೪,೪೯೮-೪೭	
ಇತರೆ ಸಾಧಿಲ್ವಾರು ಬಾಬುಗಳು	೩,೫೮೮,೧೭೪-೫೦	ಡೆಡ್ ಸ್ಟಾಕ್		೧,೬೪,೮೫೭-೬೬
ಉಗ್ರಾಣದ ಬಗೆಹರಿಯದ ಖಾತೆ	೧೬,೬೫೧-೯೫	ತನಿಖಾ ವರದಿಯಲ್ಲಿ ಆಕ್ಷೇಪಣೆಯಾದ ಮೊಬಲಗು ಮತ್ತು ವಸೂಲಿಯಾಗತಕ್ಕದ್ದು (೭೪-೭೫)		೩,೫೨೮-೮೬
ಪಾರಾಟ ಮಹಾಮಂಡಲಕ್ಕೆ ಕೊಡಬೇಕಾದ್ದು	೨೮ ೮೫೬-೦೦	ಡಿಟೋ (೭೫-೭೬)		೧೫,೬೦೩-೦೪
ನಿವ್ವಳ ಲಾಭ	೯,೯೮೮-೬೪	ಬಹಿರಂಗ ಮಾರುಕಟ್ಟೆಯ ಶಿಲ್ಕು		೧೬,೪೦೪-೭೫
		ಹಿಂದಿನ ಆಡಾವೆ ಪತ್ರಿಕೆ ಪ್ರಕಾರ ವತ್ತಿ ಸಾಲ		೯೬೮-೪೪

ಜವಾಬ್ದಾರಿ		ಆಸ್ತಿ	
		ಮುಂಗಡಗಳು ಮತ್ತು ಇತರ ವಸೂಲಾತಿ ಬಾಬುಗಳು	೬೯,೬೨೭–೧೪
		ವಸೂಲಿಯಾಗುವ ಖರೀದಿ ಮುಂಗಡ	೨,೮೩೧–೩೪
		ಪ್ರೋಕ್ಯೂರ್‌ಮೆಂಟಿನಲ್ಲಿ ವಸೂಲಿಯಾಗುವ ಬಾಬತ್ತು (೭೬–೭೭)	೨,೨೨೬–೨೮
		೨೬–೭೭ರ ಆಡಾವೆ ಪತ್ರಿಕೆಯ ಪ್ರಕಾರ ವಸೂಲಿಯಾಗಬೇಕಾಗಿದ್ದು	೯೭೫–೭೦
		ಡಿಟೋ (೭೮–೭೯)	೧,೬೫೯–೪೩
		ಖರೀದಿ ಮುಂಗಡ	೧೩,೫೯೦–೯೪
		ಇತರ ಆಸ್ತಿಗಳು	೩,೬೩,೨೯೭–೯೫
		ಆಹಾರ ನಿಗಮದಿಂದ ಬರಬೇಕಾದ ಬಾಬತ್ತು	೨೯,೬೬೮–೦೦
		೮೧–೮೨ರ ಸಾಲಿನಲ್ಲಿ ಜಿಲ್ಲಾ ಅಧಿಕಾರಿಯಿಂದ ಬರಬೇಕಾದ್ದು ಸಾರಿಗೆ ಹಣ	೧,೬೫೫–೦೦
		ವಿಶ್ವನಾಥ್‌ರವರಿಂದ ಬರಬೇಕಾದದ್ದು	೬೨೧–೦೫
		ಚೆಕ್ ಕಲೆಕ್ಷನ್	೫೩೧–೨೫
		೮೧–೮೨ರ ಸಾಲಿನ ಇತರ ಬಾಬುಗಳು	೨,೩೭೬–೮೯
		ಸಂಬಳದ ಮುಂಗಡ	೨೯೪–೨೫
		ಆರ್‌ಡಿಎಸ್ ಮತ್ತು ಜಿಲ್ಲಾಧಿಕಾರಿಗಳಿಂದ ಧನ ಸಹಾಯ ಖಾತೆ	೭೪,೨೬೪–೦೧
		ಮುಂಕ್ಕಾಯು ಶಿಲ್ಕು	೧,೦೯,೦೪೯–೦೦
		ಕೂಡಿಬಿದ್ದ ಹಾನಿ	೨,೮೪,೫೯೦–೦೭
ಮೊತ್ತ	೧೨,೪೨,೧೮೧–೭೦	ಮೊತ್ತ	೧೨,೪೨ ೧೮೧–೭೦

ಭಾಲ್ಕಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ. ಭಾಲ್ಕಿ, ಬೀದರ್ ಜಿಲ್ಲೆ
1982–83ನೇ ಸಾಲಿನ ವ್ಯಾಪಾರ ತಃಖ್ತೆ (ತಾತ್ಕಾಲಿಕ)

ಖರೀದಿ		ಮಾರಾಟ	
ಪ್ರಾರಂಭದ ಶಿಲ್ಕು	೫೮,೪೬೮–೦೫	ಮಾರಾಟ	೬,೮೦,೧೪೪–೩೬
ಪ್ರಸಕ್ತ ಸಾಲಿನಲ್ಲಿ ಖರೀದಿಸಿದ್ದು	೭,೮೩೩–೮೪	ಹಿಂತಿರುಗಿಸಿದ ಮಾಲು	೧,೭೮೦–೦೦
	೮,೪೨,೧೪೪–೨೧		೬,೭೮,೩೬೪–೩೬
ಹಿಂತಿರುಗಿಸಿದ ಮಾಲು ಕಳೆದದ್ದು	೬೧,೮೨೨–೦೦	ವ್ಯಾಪಾರ ವೆಚ್ಚಗಳು	೨೭,೨೩೩–೬೬
	೭,೮೦,೩೨೨–೨೧		
ವ್ಯಾಪಾರ ವೆಚ್ಚಗಳು	೩೧,೯೮೩–೧೨	ಆಹಾರ ನಿಗಮದಿಂದ ಬರತಕ್ಕದ್ದು	೨೯,೬೬೮–೦೦
ವ್ಯಾಪಾರ ಲಾಭ	೪೨,೧೯೦–೪೮	ಅಂತಿಮ ಶಿಲ್ಕು	೧,೧೯,೧೪೯–೮೦
	೮,೫೪,೪೧೫–೮೧		೮,೫೪,೪೧೫–೮೧

1982–83ನೇ ಸಾಲಿನ ಲಾಭ ಮತ್ತು ನಷ್ಟದ ತಃಖ್ತೆ (ತಾತ್ಕಾಲಿಕ)

ವೆಚ್ಚ		ಆದಾಯ	
ಸಂಬಳ	೩೨,೩೮೭–೫೦	ವ್ಯಾಪಾರದ ಒಟ್ಟು ಲಾಭ	೪೨,೧೧೦–೪೮
ಲೇಖನಿ ಸಾಮಗ್ರಿಗಳು	೧,೭೪೪–೨೮	ತೆಂಪಣಿಗಳ ಮೇಲೆ ಬಡ್ಡಿ	೬,೦೭೭–೦೦
ಅಂಚೆ ವೆಚ್ಚ	೨೭೮–೫೫	ಬಾಡಿಗೆ ವಸೂಲಿಯಾಗತಕ್ಕದ್ದು	೧,೬೦೨–೦೦
ಪುಂದ್ರುಣ ವೆಚ್ಚ	೪೬೩–೦೦		
ವಿದ್ಯುಚ್ಛಕ್ತಿ ವೆಚ್ಚ	೯೯–೮೫		
ಇತರೆ ಮತ್ತು ಬಾಡಿಗೆ	೧,೩೮೧–೬೫		
ಕಾನೂನು ಶುಲ್ಕ	೧೫೦–೦೦		

ವೆಚ್ಚ		ಆದಾಯ	
ಬಡ್ಡಿ ಪಾವತಿ	೪೯–೯೧		
ಪ್ರವಾಸ ಮತ್ತು ತುಟ್ಟಿಭತ್ಯ	೧೪–೦೦		
ದೇಣಿಗೆ	೨೫–೦೦		
ಸಹಕಾರ ಒಕ್ಕೂಟ ನಿಧಿ	೭೫–೦೦		
ನಿವ್ವಳ ಲಾಭ	೯,೯೮೮–೬೪		
	೪೯,೭೮೭–೪೮		೪೯,೭೮೭–೪೮

ಭಾಲ್ಕಿ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ನಿಯಮಿತ, ಭಾಲ್ಕಿ, ಬೀದರ್ ಜಿಲ್ಲೆ
ವರ್ಷಾವಧಿ ವ್ಯವಹಾರ, ಆದಾಯ, ವೆಚ್ಚ ಮತ್ತು ಲಾಭ (ಆಡಳಿತ ಅಧಿಕಾರಾವಧಿಯಲ್ಲಿ)

ಸಾಲು	ವ್ಯವಹಾರ	ಆದಾಯ	ವೆಚ್ಚ		ಲಾಭ / ನಷ್ಟ	ವಿಮರ್ಶೆ
೧೯೭೯–೮೦	೨೩,೩೦,೪೩೧–೦೦	೪೭,೪೪೨–೦೦	೨೧,೨೪೯–೧೫	+	೨೬,೧೬೨–೬೭	ಆಡಳಿತ ಅಧಿಕಾರಿಯು ತಾ. ೨೪–೬–೭೯ರಲ್ಲಿ ಅಧಿಕಾರ ವಹಿಸಿಕೊಂಡರು
೧೯೮೦–೮೧	೩೭,೯೫,೯೮೬–೦೦	೫೧,೫೧೯–೬೯	೪೬,೨೮೬–೫೯	+	೫,೨೩೨–೬೦	
೧೯೮೧–೮೨	೨೭,೨೩,೪೬೭–೦೦	೧೭,೨೩೬–೭೦	೬೭,೬೯೯–೩೩	—	೫೦,೪೬೨–೧೬	
೧೯೮೨–೮೩	೮,೧೨,೩೦೫–೩೩	೪೮,೧೮೭–೪೮	೩೯,೭೯೮–೪೪	+	೯,೯೮೮–೬೪	ಅಧಿಕಾರ ಪೂರ್ವಾವಧಿಯನ್ನು ೩೦–೮–೮೩ರವರೆಗೆ ವಿಸ್ತರಿಸಲಾಗಿದೆ.